ಶ್ರೀ ಪಿ.ಜಿ.ಆರ್. ಸಿಂಧ್ಯ.—ಮಾನ್ಯ ಸದಸ್ಯರ ಆಹ್ವಾನದ ಮೇರೆಗೆ ಅವರ ಜೊತೆಯಲ್ಲಿ ಪ್ರವಾಸ ಮಾಡಿ ಅಲ್ಲಿರತಕ್ಕ ಎಲ್ಲಾ ವಿಷಯವನ್ನು ತಿಳಿದುಕೊಂಡು ಸರಿಯಾದ ಒಂದು ತೀರ್ಮಾನಕ್ಕೆ ಬರುತ್ತೇನೆ.

ಉಪಾಧ್ಯಕ್ಷರು.—ಶ್ರೀ ಎಂ.ಎಲ್. ವಂಶತ್ತಣ್ಣನವರ್, ಮಾನ್ಯ ಸದಸ್ಯರು ಹಾಜರಿಲ್ಲ...

ಜನತಾ ಗೃಹಗಳು

೪೮೪. ಶ್ರೀ ಜಿ.ಎಸ್. ಶಿವನಂಜಪ್ಪ (ಗುಬ್ಬಿ).—ಮಾನ್ಯ ಸಾರಿಗೆ ಹಾಗೂ ವಸತಿ ರಾಜ್ಯ ಮಂತ್ರಿಗಳು ಈ ಕೆಳಕಂಡ ವಿಷಯಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ೧೯೮೦-೮೧ ರಿಂದ ೧೯೮೪-೮೫ರ ವರೆವಿಗೆ ತುರುವೇಕೆರೆ ತಾಲ್ಲೂಕು ಮಾರಸಂದ್ರ ಗ್ರಾಮದಲ್ಲಿ ಕಟ್ಟಿಸಿರುವ ಜನತಾ ಮನೆಗಳ ಸಂಖ್ಯೆ ಎಷ್ಟು, ಮತ್ತು ಅವುಗಳನ್ನು ಯಾರು ಯಾರಿಗೆ ನೀಡಲಾಗಿದೆ ?

ಆ) ಮೇಲ್ಕಂಡ ಮನೆಗಳ ನಿರ್ಮಾಣಕ್ಕೆ ತಗಲಿದ ವೆಚ್ಚವೆಷ್ಟು ?

ಶ್ರೀ ಪಿ.ಜಿ.ಆರ್. ಸಿಂಧ್ಯ (ಸಾರಿಗೆ ಹಾಗೂ ವಸತಿ ರಾಜ್ಯ ಮಂತ್ರಿಗಳು).—

ಅ) ೩ ಜನತಾ ಮನೆಗಳನ್ನು ಕಟ್ಟಿಸಿದೆ (ಯಾರಿಗೆಕೊಟ್ಟಿದೆ ಎಂಬುದನ್ನು ಅನುಬಂಧದಲ್ಲಿ ವಿವರಿಸಲಾಗಿದೆ)

ಆ) ರೂ. ೯೦೦೦-೦೦

ಅನುಬಂಧ

೧೯೮೩-೮೪

೧	ಕೆಂಪನರಸಯ್ಯ ಬಿನ್ ನರಸಯ್ಯ	...	೩೦೦೦-೦೦
೨	ಗಂಗನರಸಯ್ಯ ಬಿನ್ ಕೆಂಪನರಸಯ್ಯ	...	೩೦೦೦-೦೦
೩	ಕರಿಯಪ್ಪ ಬಿನ್ ನರಸಯ್ಯ	...	೩೦೦೦-೦೦

ಶ್ರೀ ಜಿ. ಎಸ್. ಶಿವನಂಜಪ್ಪ.—ಮಾನ್ಯ ಉಪಾಧ್ಯಕ್ಷರೆ, ನಾನು ತುರುವೇಕೆರೆ ತಾಲ್ಲೂಕು ಮಾರಸಂದ್ರ ಗ್ರಾಮಕ್ಕೆ ಹೋಗಿದ್ದೇನೆ. ಸುಮಾರು ೧೦ ಜನ ಹರಿಜನರ ಹೆಸರಿನಲ್ಲಿ ಮನೆಗಳನ್ನು ಕಟ್ಟಿಸಿದ್ದೇವೆಂದು ಲೆಕ್ಕಪತ್ರದಲ್ಲಿ ತೋರಿಸಿ ಮನೆಗಳನ್ನು ಕಟ್ಟಿಲ್ಲ ಎನ್ನುವ ಆಪಾದನೆ ಇದೆ. ಮಾನ್ಯ ಮಂತ್ರಿಗಳು ಕೊಟ್ಟಿರತಕ್ಕ ಉತ್ತರ ಬಹುಶಃ ಸರಿಯಾಗಿಲ್ಲ. ದಯವಿಟ್ಟು ಮಾನ್ಯ ಮಂತ್ರಿಗಳು ಇದರ ಬಗ್ಗೆ ಮತ್ತೊಂದು ಸಾರಿ ಪರಿಶೀಲನೆ ಮಾಡುತ್ತಾರೆಯೇ ?

ಶ್ರೀ ಪಿ. ಜಿ. ಆರ್. ಸಿಂಧ್ಯ.—ಮಾನ್ಯ ಸದಸ್ಯರು ಆ ಊರಿಗೆ ಭೇಟಿ ಕೊಟ್ಟಾಗ ಆ ರೀತಿ ಯಾರಾದರೂ ಹೇಳಿರಬಹುದು. ನಾವು ಹೇಳಿರತಕ್ಕ ಉತ್ತರ ಜಿಲ್ಲಾಧಿಕಾರಿಗಳು ಕೊಟ್ಟಿರತಕ್ಕ ವರದಿ ಆ ಊರಿನಲ್ಲಿ ಮೂರು ಮನೆಗಳನ್ನು ಕಟ್ಟಿಸಿದ್ದೇವೆ. ಮಾನ್ಯ ಸದಸ್ಯರು ಹೇಳುತ್ತಿರುವ ವಿಷಯದ ಬಗ್ಗೆ ಸಾಕ್ಷಿ ಪುರಾವೆಗಳು ಇಲ್ಲ, ನಾನು ಪುನಃ ಏತಕ್ಕೆ ರಿಪೋರ್ಟ್ ತರಿಸಿಕೊಳ್ಳಲಿ ?

ಶ್ರೀ ಜಿ. ಎಸ್. ಶಿವನಂಜಪ್ಪ.—ನಾನು ಸಾಕ್ಷಿ ಪುರಾವೆಗಳನ್ನು ಕೊಡುತ್ತೇವೆ. ಉತ್ತರವನ್ನು ಕಳಂಹಿಸತಕ್ಕ ಅಧಿಕಾರಿಗಳು ಜವಾಬ್ದಾರಿಯುತ ಉತ್ತರವನ್ನು ಕೊಡಬೇಕು. ೧೯೮೧-೮೨ರಿಂದ ೧೯೮೪-೮೫ರವರೆಗೆ ೧೦ ಮನೆಗಳನ್ನು ಕಟ್ಟಿಸಿದ್ದೇವೆಂದು ಹೇಳಿದ್ದಾರೆ. ಅದರಲ್ಲಿ ಭ್ರಷ್ಟಾಚಾರ ನಡೆದಿದೆ. ಹರಿಜನರಿಗೆ ಮನೆಗಳನ್ನು ಕಟ್ಟಿಸಿದ್ದೇವೆಂದು ಹೇಳಿ ಲೆಕ್ಕದಲ್ಲಿ ತೋರಿಸಿ ಹಣವನ್ನು ನುಂಗಿ ಹಾಕಿದ್ದಾರೆಂದು ಹೇಳುತ್ತಿದ್ದೇನೆ. ಸರಿಯಾದ ರೀತಿಯಲ್ಲಿ ವರದಿಯನ್ನು ತರಿಸಿ ನಮಗೆ ಉತ್ತರ ಹೇಳಬೇಕು.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಮಾನ್ಯ ಸದಸ್ಯರು ಹೇಳತಕ್ಕ ವಿಚಾರ ಸತ್ಯಕ್ಕೆ ದೂರವಾದುದು ತುರುವೇಕೆರೆ ತಾಲ್ಲೂಕು ಮಾರಸಂದ್ರ ಗ್ರಾಮದಲ್ಲಿ ಕಟ್ಟಿರತಕ್ಕ ಮನೆಗಳು ಮೂರು ಮಾತ್ರ.

ಶ್ರೀ ಜಿ. ಎಸ್. ಶಿವನಂಜಪ್ಪ.—ಇದರ ಬಗ್ಗೆ ಸರಿಯಾದ ಮಾಹಿತಿಯನ್ನು ಒದಗಿಸಿಕೊಟ್ಟರೆ ತಾವು ಏನು ಮಾಡುತ್ತೀರಿ ?

ಶ್ರೀ ಪಿ. ಜಿ. ಆರ್. ಸಿಂಧ್ಯ.—ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳುತ್ತೇನೆ.